ಉಳಿಸಿದ್ದ ನೋಡಿ ನಗೆ ತಡಿಲಾಯ್ದೇ ಇಲ್ಲೆ." ದೇವಕಿಯ ನೆನಪಿನ ಪ್ರಸಂಗಕ್ಕೆ ಯಾರೂ ನಗಲಿಲ್ಲ.

ಬಾಬಣ್ಣ ನೀಡುತ್ತ ಬಂದ ಸಹಾಯದ ವಿಷಯದಲ್ಲಿ ತಾನು ಅದೆಷ್ಟು ನಿರುಪಾಯಳು ಎಂದು ಮಾಲತಿಗೆ ಸಂಕಟವಾಯಿತು. ಬೇಡ್ತಿ ಹೊಳೆ ಆಚೆಗೆ ಮಗಳನ್ನು ಮದುವೆ ಮಾಡಿ ಕೊಡುವುದಿಲ್ಲ ಎಂದು ಅಪ್ಪಯ್ಯ ಹೇಳುತ್ತಿದ್ದದ್ದು ನೆನಪಾಯಿತು. ಆದರೆ ಹಣೆಯಲ್ಲಿ ಬರೆದ ಯೋಗ ಈ ಕಾಲು ದಾರಿಯ ಕಾಡು ದ್ವೀಪಕ್ಕೆ ಕರೆದುಕೊಂಡು ಬಂದು ಬಿಟ್ಟು ಹೋಯಿತು. ಆದರೆ, ಗಂಡನ ಛಲದ ದುಡಿಮೆಯಿಂದಾಗಿ ವನವಾಸ ಎಂದನಿಸಲಿಲ್ಲ. ಕೊಟ್ಟಿಗೆಗೆ ಹೋಗಿ ಹೊರಗೆ ನಿಂತ ಕೆಂಪಿಯನ್ನು ಕಣ್ಣೆ ಹಾಕಿ ಕಟ್ಟುತ್ತ ಈ ಬಾಬಣ್ಣನೇ ದಲಾಲಿಕೆ ಮಾಡಿ ಮದುವೆ ಮಾಡಿಸಿದನ್ನು ನೆನೆದಳು. ಮನೆ ಕಟ್ಟುವಾಗ ಬೇಕಾದ ಮರಮಟ್ಟಿಗೆ ಮಾಲ್ಕಿ ವ್ಯವಹಾರ ಕುದುರಿಸಿ ಕೊಟ್ಟವನು ಬೇರೆ ಯಾರೂ ಅಲ್ಲ. ತುದಿಗಾಲಲ್ಲಿ ಹಾಲು ಕರೆಯಲು ಕೂತಳು. ತಿರುಮಲ ತಿಂಗಳವರೆಗೆ ಜ್ವರದಲ್ಲಿ ನರಳಿದ. ಜೋರು ಮಾಡಿ ಹುಬ್ಬಳ್ಳಿಯ ಆಸ್ಪತ್ರೆಗೆ ಕಳಿಸಿದವನು ಬಾಬಣ್ಣನೇ. ನೊರಜಿನ ಕಾಟ. ಕಾಲು ತುರಿಸಿತು. ಕತ್ತದ ಹೊಗೆ ಹಾಕಬೇಕಿತ್ತು. ಕೊನೆಯ ಒಂದು ವಾರ ನನ್ನ ಸ್ಥಾನದಲ್ಲಿ ನಿಂತು ಶುಶ್ರೂಷೆ ಮಾಡಿದ. ಕೆಂಪಿಯ ಕೆಚ್ಚಲು ಸೊರಗಿದೆ. ಹಾಲು ಮುಡಿಸಿ ತರ್ಪಾಗುವ ದಿವಸವಾಯಿತು. ಹಿಂಡಿದ್ದು ನೋವಾಗಿ ಆಚೀಚೆ ಸರಿದಾಡಿತು. ಬೆಚ್ಚಗಿನ ನೊರೆ ಹಾಲು ಅರ್ಧ ತಂಬಿಗೆ ತುಂಬಿರಬಹುದು. ಹಾಲು ಕುಡಿಯಲು ಕರು ಬಿಟ್ಟು ಕಾದಳು. ಹಣೆಯಿಂದ ಕೆಚ್ಚಲು ಗುದ್ದುತ್ತ ಖುಷಿಯಲ್ಲಿ ಬಾಲತಿರುವಿ ಕೆಂಪಿಗೆ ಮುಕಳಿ ನೆಕ್ಕಲು ಬಿಟ್ಟು ಮೊಲೆ ಚೀಪಿತು. ಕೇವಲ ನಲವತ್ತೈದಕ್ಕೆ ತಿರುಮಲ ಕಣ್ಮುಚ್ಚಿದ. "ಮಾಲತಿ, ಹರಿಗದ್ದೆ ಕಾಡ್ನಲ್ಲಿ ನಿಂಗ್ಳತ್ರ ಜೀವನ ಮಾಡಲಾಗ್ತಿಲ್ಲೆ. ಆ ಜಮೀನು ಮಾರಿ ನೀನು ಮತ್ತೆ ತಂಗಿ ಪೇಟೆಗೆ ಹೋಗಿ ಉಳ್ಕಳಿ" ಅದು ಅವನ ಉಸಿರಿಂದ ಹೊರಟ ಒಡಲಾಳದ ಕೊನೆಯ ಮಾತು. ವಿದಾಯದ ದೃಷ್ಟಿಯೊಂದಿಗೆ ದೀಪದಂತಹ ದನಿಯನ್ನು ತನ್ನೊಳಗೆ ಹಚ್ಚಿ ಹೋಗಿದ್ದಾನೆ; ಬಿರುಗಾಳಿಯ ನಡುವೆ ಅದನ್ನು ಆರದಂತೆ ಕಾಪಾಡುವ ಹೊಣೆ ತನ್ನ ಮೇಲಿದೆ. ಕೆಂಪಿ ಒದೆಯಿತು. ಕರುವನ್ನು ಜಗ್ಗಿ ಕಣ್ಣೆ ಕಟ್ಟಿ ತಂಬಿಗೆ ಹಿಡಿದು ಬಂದಳು. ತೆಳು ಬೆಳದಿಂಗಳಲ್ಲಿ ಬೇಟೆಗೆ ಕುಳಿತ ಬೆಕ್ಕು ಚಂಗನೆ ಹಾರಿ ಮಾಲತಿಯ ಕಾಲಿಗೆ ಅಡ್ಡ ಬಂದು ಎಡಗಣೆಸಿತು.

ಮಾಲತಿಗೆ ಕಳೆದ ಮೂರು ತಿಂಗಳ ಮಳೆಗಾಲದ ನರಕ ನೆನಪಾಯಿತು. ತಿರುಮಲನ ಸಂಸ್ಕಾರವನ್ನು ಗೋಕರ್ಣದಲ್ಲಿ ಮುಗಿಸಿ ಮರಳಿದ ವಾರದಲ್ಲೆ ಮಳೆ ಶುರುವಾಗಿತ್ತು. ಗಾಳಿ ಮಳೆಗೆ ಹರಿಗದ್ದೆ ರಸ್ತೆಯ ಕರೆಂಟ್ ಲೈನ್ ಮೇಲೆ ಮರಗಳುರುಳಿ ಚಿಮ್ಣಿ ದೀಪದ ಅನಾದಿ ಕಾಲ ಮರಳಿತ್ತು. ಹಳ್ಳದ ಒಡ್ಡೊಡೆದು ಗದ್ದೆ ಮೇಲೆ ಪ್ರಳಯಾಂತಕ ನದಿಯಾಗಿ ಮಣ್ಣು ಕೊಚ್ಚಿ ಹರಿಯಿತು. ಜೀಗುಡುವ ಅದಿಮ ಪ್ರಾಚೀನ ಜಗತ್ತು ಜೀವತಳೆದಂತಿತ್ತು. ಸುತ್ತಲಿನ ಅಡವಿಯಿಂದಾಗಿ ಮಳೆಯ ಅಬ್ಬರ ಜೋರಾಗಿ ಕೇಳುತ್ತಿತ್ತು. ಹಗಲಿಡೀ ಮುಸ್ಸಂಜೆಯಂಥ ಮಬ್ಬು; ಯೋಗವಿದ್ದರೆ ಮಳೆನಿಂತ ಗದ್ದೆಯ ಪೂರ್ವಕ್ಕೆ ಮೋಹಕ ಕಾಮನಬಿಲ್ಲು; ರಾತ್ರಿ ಭೋರ್ಗರೆಯುವ ಗಾಢಾಂಧಕಾರ. ಕತ್ತಲು ಕೊಳೆಯುತ್ತಿರುವ ಹಾಗೆ. ಮಳೆ ಹೊಳುವಾದಾಗ ಗದ್ದೆಯಲ್ಲಿ ಕಪ್ಪೆಗಳ ತಾರಕಕ್ಕೇರಿದ ಏಕತಾನ ಸಮೂಹ ಗಾನಗೋಷ್ಠಿ; ಹರಿವ, ಹಾರುವ ನಾನಾ ಜಾತಿಯ ಹುಳಹುಪ್ಪಟೆ; ಹಿತ್ತಲತ್ತ ನೊಣ ಹಾರುವ ಹಲಸಿನ ಹಣ್ಣಿನ ಪರಿಮಳ; ಒದ್ದೆ ಸೌದಿಯ ಒಲೆಯಿಂದ ಹರಡುವ ಜಡ ಹೊಗೆ; ದೀಪದ ಅಸು ಹಾರಿಸುವ ಸಂಧಿಸಂಧಿಯಿಂದ ಸುಂಯಿಗುಡುವ ಚಳಿ ಗಾಳಿ. ಹಾದಿ ತಪ್ಪಿಯೂ ಹರಿಗದ್ದೆಯತ್ತ ಒಂದು ನರಹುಳವೂ ಸುಳಿಯಲಿಲ್ಲ. ಮನೆ ಮಧ್ಯ ತಳವೇ ಇಲ್ಲದ ಕತ್ತಲ ಪಾತಾಳದ ನೀರವ ಬಾವಿ ಬಾಯ್ತೆರೆದು